# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156
(ನ್ಯಾಕ್‌ಮಾನ್ಯತೆ ಬಿ+ ಗ್ರೇಡ್-2021) ಪಿಎಂ-ಉಷಾ (ಮೇರು)
(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

# KITTURU RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade – 2021) PM-UShA (MERU)
*(Formerly known as 'Rani Channamma University, Belagavi')*

E-mail: registrar@rcub.ac.in | ಕುಲಸಚಿವರ ಕಾರ್ಯಾಲಯ Office of the Registrar | Website: www.rcub.ac.in Phone No.: 0831-2565234


ಸಂ: ಕಿರಾಚವಿ/ಬೆಳಗಾವಿ/ಕುಸಕಾ/2026-27/ 2981 ದಿನಾಂಕ: 1 SEP 2026

## ಸುತ್ತೋಲೆ

**ವಿಷಯ:** ವಿಶ್ವವಿದ್ಯಾಲಯದ ಜಾಲತಾಣದಲ್ಲಿ (Website) ಮಾಹಿತಿ ಮತ್ತು ವೆಬ್ ವಿಷಯಗಳ ಕಡ್ಡಾಯವಾಗಿ ನವೀಕರಣಗೊಳಿಸುವ ಕುರಿತು.

ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣವು (rcub.ac.in) ವಿದ್ಯಾರ್ಥಿಗಳ, ಸಂಯೋಜಿತ ಕಾಲೇಜುಗಳ, ಸಾರ್ವಜನಿಕರಿಗೆ ಪ್ರಮುಖ ಡಿಜಿಟಲ್ ಸಂಪರ್ಕ ಮಾಧ್ಯಮವಾಗಿ ಕಾರ್ಯನಿರ್ವಹಿತ್ತಿದ್ದು, ಪ್ರಸ್ತುತ ಜಾಲತಾಣದಲ್ಲಿ ಪ್ರಕಟಿಸಿರುವ ವಿವಿಧ ಶೈಕ್ಷಣಿಕ ವಿಭಾಗಗಳು, ಆಡಳಿತ ವಿಭಾಗಗಳು, ವಿಶೇಷ ಕೋಶಗಳು ಮತ್ತು ಅಧ್ಯಯನ ಪೀಠಗಳಿಗೆ (Study Chairs) ಸಂಬಂಧಿಸಿದ ಮಾಹಿತಿಯನ್ನು ತಕ್ಷಣವೇ ಪರಿಷ್ಕರಿಸುವ ಅಗತ್ಯವಿದೆ.

ಆದ್ದರಿಂದ, ವಿಶ್ವವಿದ್ಯಾಲಯದ ಮಾಹಿತಿಯನ್ನು ನಿಖರವಾಗಿ, ನವೀಕೃತ ಮತ್ತು ಸಮಗ್ರ ಮಾಹಿತಿಯನ್ನು ಕಾಲಕ್ರಮೇಣ ಖಚಿತಪಡಿಸಿಕೊಳ್ಳಲು ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು/ಸಿಬ್ಬಂದಿಗಳು ತಮ್ಮ ತಮ್ಮ ಜಾಲತಾಣದ ಪುಟಗಳನ್ನು ಪರಿಶೀಲಿಸಲು ಮತ್ತು ನವೀಕರಿಸಿದ ಮಾಹಿತಿಯನ್ನು ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ಎಲ್ಲಾ ವಿಭಾಗದ ಮುಖ್ಯಸ್ಥರು, ವಿಭಾಗದ ಅಧಿಕಾರಿಗಳು, ಕೋಶಗಳ ಸಂಯೋಜಕರು ಮತ್ತು ಅಧ್ಯಯನ ಪೀಠಗಳ ನಿರ್ದೇಶಕರು/ಸಂಯೋಜಕರು ತಮ್ಮ ವ್ಯಾಪ್ತಿಗೆ ಬರುವ ಈ ಕೆಳಗಿನ ಮಾಹಿತಿಯನ್ನು ಕಡ್ಡಾಯವಾಗಿ ಸಿದ್ಧಪಡಿಸಿ ಸಲ್ಲಿಸತಕ್ಕದ್ದು:

**1. ಸಾಮಾನ್ಯ ಪರಿಚಯ (General Profile)**

- **ವಿಭಾಗ / ಕೋಶ / ಅಧ್ಯಯನ ಪೀಠದ ಬಗ್ಗೆ:** ಕಿರು ಪರಿಚಯ, ದೃಷ್ಟಿಕೋನ (Vision), ಉದ್ದೇಶಗಳು ಮತ್ತು ಪ್ರಮುಖ ಕಾರ್ಯಗಳು.
- **ಸಿಬ್ಬಂದಿ ವಿವರಗಳು:** ಬೋಧಕ/ಬೋಧಕೇತರ ಸಿಬ್ಬಂದಿ, ಸಂಯೋಜಕರು, ಅವರ ಪದನಾಮಗಳು (Designations) ಮತ್ತು ಅಧಿಕೃತ ಇಮೇಲ್ ಐಡಿಗಳ ಪ್ರಸ್ತುತ ಪಟ್ಟಿ.

**2. ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿವರಗಳು (ಅನ್ವಯಿಸುವಂತೆ)**

- **ಕಾರ್ಯಕ್ರಮಗಳು / ಸೇವೆಗಳ ವಿವರ:** ಅರ್ಹತಾ ಮಾನದಂಡಗಳು, ಶುಲ್ಕ ರಚನೆ (Fee structures), ಅರ್ಜಿಯ ನಮೂನೆಗಳು, ಅರ್ಜಿ ಸಲ್ಲಿಸುವ ಹಂತ-ಹಂತದ ಪ್ರಕ್ರಿಯೆ (Application flow) ಮತ್ತು ಸೇವೆಯನ್ನು ಪಡೆಯಲು ಇರುವ ಕಾಲಮಿತಿ (Timeline).
- **ಶಾಸನಗಳು ಮತ್ತು ನಿಯಮಾವಳಿಗಳು (Statutes & Ordinances):** ವಿಭಾಗಕ್ಕೆ ಅನ್ವಯವಾಗುವ ಸಂಬಂಧಿತ ನಿಯಮಗಳು, ನಿಬಂಧನೆಗಳು ಅಥವಾ ಮಾರ್ಗಸೂಚಿಗಳು.
- **ಪ್ರಮುಖ ದಾಖಲೆಗಳು:** ವಾರ್ಷಿಕ ವರದಿಗಳು, ಬಜೆಟ್, ಅಥವಾ ಆಡಿಟ್ ಸಾರಾಂಶಗಳು (ವಿಶೇಷವಾಗಿ ಆಡಳಿತ/ಹಣಕಾಸು ವಿಭಾಗಗಳಿಗೆ).

**3. ಚಟುವಟಿಕೆಗಳು, ಸಂಶೋಧನೆ ಮತ್ತು ಕಾರ್ಯಕ್ರಮಗಳು**

- **ಅಧ್ಯಯನ ಪೀಠಗಳ ಮಾಹಿತಿ:** ನಿರ್ದಿಷ್ಟ ಸಂಶೋಧನಾ ಚಟುವಟಿಕೆಗಳು, ಪ್ರಕಟಣೆಗಳು, ವಿಶೇಷ ವಿಸ್ತರಣಾ ಉಪನ್ಯಾಸಗಳು ಮತ್ತು ಆಯಾ ಪೀಠದ ಅಡಿಯಲ್ಲಿ ನಡೆಯುತ್ತಿರುವ ಯೋಜನೆಗಳು.

ಮುಂದುವರೆದಿದೆ...2

- **ಇತ್ತೀಚಿನ ಕಾರ್ಯಕ್ರಮಗಳು:** ಇತ್ತೀಚಿನ ಕಾರ್ಯಾಗಾರಗಳು, ವಿಚಾರಸಂಕಿರಣಗಳು ಅಥವಾ ಉಪಕ್ರಮಗಳ (Initiatives) ವಿವರಗಳು.
- **ಸೌಲಭ್ಯಗಳು / ಮೂಲಸೌಕರ್ಯ:** ವಿಶೇಷ ಪ್ರಯೋಗಾಲಯಗಳು, ಉಪಕರಣಗಳು, ಗ್ರಂಥಾಲಯ ಸಂಪನ್ಮೂಲಗಳು ಅಥವಾ ವಿದ್ಯಾರ್ಥಿ ಸೇವೆಗಳು.

**4. ಸಂಪರ್ಕ ಮಾಹಿತಿ (Contact Information)**

- ಅಧಿಕೃತ ಸಂಪರ್ಕ ಸಂಖ್ಯೆಗಳು, ಇಮೇಲ್ ವಿಳಾಸಗಳು ಮತ್ತು ಕಚೇರಿಯ ನಿಖರ ಸ್ಥಳ (ಉದಾ: ಕಟ್ಟಡದ ಹೆಸರು, ಕೊಠಡಿ ಸಂಖ್ಯೆ).

**ಸಲ್ಲಿಸುವ ಮಾರ್ಗಸೂಚಿಗಳು (Submission Guidelines):**

1. **ಕಡ್ಡಾಯ ಜಾಲತಾಣ ಪರಿಶೀಲನೆ:** ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಪ್ರಸ್ತುತ ವಿಶ್ವವಿದ್ಯಾಲಯದ ಜಾಲತಾಣಕ್ಕೆ (rcub.ac.in) ಭೇಟಿ ನೀಡಿ, ತಮ್ಮ ವಿಭಾಗದ ಪುಟಕ್ಕೆ ಹೋಗಿ, ಯಾವ ಮಾಹಿತಿ, ಲಿಂಕ್‌ಗಳು ಅಥವಾ ದಾಖಲೆಗಳು ಪ್ರಸ್ತುತ ಹಳೆಯದಾಗಿವೆ ಎಂಬುದನ್ನು ಕಡ್ಡಾಯವಾಗಿ ಪರಿಶೀಲಿಸಲು ಸೂಚಿಸಲಾಗಿದೆ.
2. ನವೀಕರಿಸಲಾದ ಎಲ್ಲಾ ಪಠ್ಯ ಮಾಹಿತಿಯನ್ನು ಸ್ಪಷ್ಟವಾಗಿ **Word Document** ಮಾದರಿಯಲ್ಲಿ ಟೈಪ್ ಮಾಡಿರಬೇಕು.
3. ಯಾವುದೇ ಪೂರಕ ದಾಖಲೆಗಳನ್ನು (ಅಧಿಸೂಚನೆಗಳು, ಅರ್ಜಿಗಳು, ಶುಲ್ಕ ರಚನೆಗಳು) **PDF** ಮಾದರಿಯಲ್ಲಿ ಲಗತ್ತಿಸಬೇಕು.
4. ಎಲ್ಲಾ ಛಾಯಾಚಿತ್ರಗಳು ಮತ್ತು ಚಿತ್ರಗಳನ್ನು (ಉದಾ: ಕಾರ್ಯಕ್ರಮದ ಫೋಟೋಗಳು, ಪ್ರೊಫೈಲ್ ಚಿತ್ರಗಳು ಅಥವಾ ಬ್ಯಾನರ್‌ಗಳು) ಕಡ್ಡಾಯವಾಗಿ JPEG (.jpg/.jpeg) ಮಾದರಿಯಲ್ಲಿ ಮಾತ್ರ ಕಳುಹಿಸಬೇಕು.
5. ಮಾಹಿತಿಯನ್ನು ಕಡ್ಡಾಯವಾಗಿ ದ್ವಿಭಾಷೆಯಲ್ಲಿ (ಕನ್ನಡ ಮತ್ತು ಇಂಗ್ಲಿಷ್) ಒದಗಿಸಬೇಕು ಮತ್ತು ಕನ್ನಡ ಪಠ್ಯಕ್ಕಾಗಿ 'Baloo Tamma 2' Font ಅನ್ನೇ ಬಳಸಬೇಕು. ಅಂತಿಮಗೊಳಿಸಿದ ಸಾಫ್ಟ್ ಕಾಪಿಗಳನ್ನು webadmin@rcub.ac.in ಗೆ ಇಮೇಲ್ ಮಾಡಬೇಕು ಮತ್ತು ಇದರ ಪ್ರತಿಯನ್ನು (CC) registrar@rcub.ac.in ಗೆ ಕಳುಹಿಸತಕ್ಕದ್ದು.

**ವಿಶೇಷ ಸೂಚನೆ:**

ಈ ಸಂಪೂರ್ಣ ಜಾಲತಾಣ ನವೀಕರಣ ಪ್ರಕ್ರಿಯೆಯನ್ನು ಮಾನ್ಯ ಕುಲಪತಿಗಳು ಖುದ್ದಾಗಿ ಮೇಲ್ವಿಚಾರಣೆ (Monitor) ಮಾಡುತ್ತಿದ್ದು, ಎಲ್ಲಾ ಅಧಿಕಾರಿಗಳು ಇದನ್ನು ಅತ್ಯಂತ ಆದ್ಯತೆಯ ಮೇರೆಗೆ ಪರಿಗಣಿಸಿ ನಿಗದಿತ ಸಮಯದೊಳಗೆ ಕಡ್ಡಾಯವಾಗಿ ಮಾಹಿತಿಯನ್ನು ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ಅಧಿಕಾರಿಗಳು ಕೋರಿದ ಮಾಹಿತಿಯನ್ನು **04-09-2026** ರೊಳಗೆ ಅಥವಾ ಅದಕ್ಕೂ ಮೊದಲು ಸಲ್ಲಿಸುವುದು. ನವೀಕೃತ ಮಾಹಿತಿಯನ್ನು ಒದಗಿಸಲು ವಿಫಲವಾದ ವಿಭಾಗಗಳ ಜಾಲತಾಣದ ಪುಟದಲ್ಲಿ "ಈ ಮಾಹಿತಿಯು ಪರಿಶೀಲನೆಯಲ್ಲಿದೆ" (Data is under review) ಎಂಬ ಸೂಚನೆಯನ್ನು ಪ್ರದರ್ಶಿಸಲಾಗುವುದು.

ಸಂತೋಷ ಕಾಮಗೌಡ ಕೆ.ಎ.ಎಸ್,
ಕುಲಸಚಿವರು

**ಕುಲಸಚಿವರು**
**ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ**
ಬೆಳಗಾವಿ

**ಇವರಿಗೆ,**

1. ಕುಲಸಚಿವರು (ಮೌಲ್ಯಮಾಪನ), ಕಿ.ರಾ.ಚ.ವಿ, ಬೆಳಗಾವಿ.
2. ಹಣಕಾಸು ಅಧಿಕಾರಿಗಳು, ಕಿ.ರಾ.ಚ.ವಿ, ಬೆಳಗಾವಿ.
3. ಎಲ್ಲಾ ನಿಕಾಯಗಳ ಡೀನರು, ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಸಂಯೋಜಕರು, ಕಿ.ರಾ.ಚ.ವಿ, ಬೆಳಗಾವಿ.
4. ಅಧ್ಯಯನ ಪೀಠಗಳ ಎಲ್ಲಾ ನಿರ್ದೇಶಕರು ಮತ್ತು ಸಂಯೋಜಕರು, ಕಿ.ರಾ.ಚ.ವಿ, ಬೆಳಗಾವಿ.
5. ಎಲ್ಲಾ ವಿಭಾಗದ ಅಧಿಕಾರಿಗಳು ಮತ್ತು ಕೋಶಗಳ ಸಂಯೋಜಕರು, ಕಿ.ರಾ.ಚ.ವಿ, ಬೆಳಗಾವಿ.
6. ನಿರ್ದೇಶಕರು, ಐ.ಟಿ ಕೋಶ, ಕಿ.ರಾ.ಚ.ವಿ, ಬೆಳಗಾವಿ. ಮುಂದಿನ ಕ್ರಮಕ್ಕಾಗಿ,

**ಪ್ರತಿ ಮಾಹಿತಿಗಾಗಿ,**

1. ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಸಚಿವಾಲಯ, ಕಿ.ರಾ.ಚ.ವಿ, ಬೆಳಗಾವಿ.